ಆದರು. ಇನ್ನು ಹೊಸ ನೆಂಟರು ಬರುವವರೆಗೆ ನಮ್ಮೆಲ್ಲರೊಂದಿಗೆ ಮಾತನಾಡುತ್ತಾರೆ.

'ನಮ್ಮ ಸುಖ- ದುಃಖಗಳಲ್ಲಿ ಭಾಗಿಯಾಗುತ್ತಾರೆ. ನಮ್ಮಲ್ಲಿ ಯಾರಿಗಾದರೂ ಸಮಸ್ಯೆ ಇದೆ ಎಂಬುದು ನಮ್ಮಿಂದಲ್ಲ ಯಾರದೇ ಮೂಲಕ ಗೊತ್ತಾದರೂ ಸಾಕು. ನಾವು ಕೇಳದೆಯೇ ಸಹಾಯಕ್ಕೆ ಬರುತ್ತಾರೆ.'

ಹೀಗೆಯೇ ಏನೇನೋ ಹೇಳುತ್ತಾ ಹೋಗುತ್ತಿದ್ದರು.

ಸುತ್ತಮುತ್ತಲಿನವರ ಮಾತು ಕೇಳಿದಾಗ ಇಂತಹ ಮನುಷ್ಯರು ಇಂದಿನ, ಅದೂ ಕುರುಡು ಕಾಂಚಾಣದ ಕುಣಿತದಿಂದಾಗಿ ಕುರುಡು ಕುರುಡಾಗಿ- ಹೊರಗಣ್ಣಿದ್ದೂ- ಆಡುವಂತೆ ಮಾಡಿರುವ ಈ ಕಾಲದಲ್ಲೂ ಇರಲು ಸಾಧ್ಯವೇ? ಎಂಬ ಭಾವ ಮೂಡಿತು.

* * *

ಇನ್ನೇನು ಮೇನ್ ರೋಡ್ ಬಂತು ಎನ್ನುವಾಗಲೇ ಶಾರ್ವರಿ ಗಕ್ಕನೆ ಬ್ರೇಕನ್ನು ಒತ್ತಿ ಕಾರನ್ನು ನಿಲ್ಲಿಸಿದಳು. ಒಮ್ಮೆ ಕಿಟಕಿಯಿಂದ ಹೊರಕ್ಕೆ ತಲೆ ಹಾಕಿ ಹಿಂದೆ ತಿರುಗಿ ಮನೆಯತ್ತ ನೋಡಿದಳು. ಇವಳ ಈ ವರ್ತನೆಯಿಂದ ಕಾರಿನಲ್ಲಿ ಕುಳಿತಿದ್ದವರಿಗೆಲ್ಲ ಒಂದು ಕ್ಷಣ ಅಚ್ಚರಿ, ಗಾಬರಿ. ಏಕೆಂದರೆ ಮೊದಲೇ ಹುಡುಗಿ, ಅದರಲ್ಲೂ ತುಂಬು ಯೌವ್ವನದವಳು. ಕಾರು ಸರಿಯಾಗಿ ಓಡಿಸಲು ಬರುತ್ತದೋ ಇಲ್ಲವೋ ಎಂಬ ಅನುಮಾನ ಸುಳಿದು ಹೋದದ್ದುಂಟು. ಇದೇ ಅನುಮಾನ ವಿಶ್ವನಾಥಯ್ಯನಲ್ಲೂ ಬಂದಿತ್ತು ಎನ್ನಿಸುತ್ತದೆ, ಶಾರ್ವರಿಯತ್ತ ತಿರುಗಿ 'ಏಕಮ್ಮಾ, ಒಮ್ಮೆಲೇ ಕಾರಿನ ಬ್ರೇಕ್ ಹಾಕಿದೆ. ಹಿಂದೆ, ಮುಂದೆ ಯಾವುದೇ ವಾಹನವೂ ಇಲ್ಲ. ಒಂದೊಮ್ಮೆ ಯಾವುದಾದರೂ ವಾಹನ ಇದ್ದಿದ್ದರೆ ಅನಾಹುತ ಆಗುತ್ತಿರಲಿಲ್ಲವೇ? ಒಮ್ಮೆಲೇ ಬ್ರೇಕ್ ಹಾಕುವುದು ಹೊಸದಾಗಿ ಡ್ರೈವಿಂಗ್ ಕಲಿತವರು ಮಾತ್ರ. ನಿನಗೆ ಡ್ರೈವಿಂಗ್ ಚೆನ್ನಾಗಿ ಬರುತ್ತದಲ್ಲವೇ?' ಒಂದೇ ಉಸಿರಿನಲ್ಲಿ ತಮ್ಮ ಮನದಲ್ಲಿದ್ದ ಎಲ್ಲ ಅನುಮಾನಗಳನ್ನು ಪ್ರಶ್ನೆಗಳ ರೂಪದಲ್ಲಿ ಕೇಳಿದರು ವಿಶ್ವನಾಥಯ್ಯ.

ಕಿಟಕಿಯಿಂದ ಆಚೆ ನೋಡುತ್ತಿದ್ದವಳು ಒಂದು ಕ್ಷಣ ಇವರೆಡೆ ತಿರುಗಿ 'ಈಗ ಕೂಗು ಬರುತ್ತದೆ ಕೇಳಿ. ಆಗ ನಿಮಗೇ ಅರ್ಥವಾಗುತ್ತದೆ' ಎಂದು ಉತ್ತರಿಸಿ ತನ್ನ ಕಿವಿಯನ್ನು ಅತ್ತಲಿಂದ ಬರುವ ಧ್ವನಿಯತ್ತ ನೆಟ್ಟಳು.

'ಓಯ್! ಪುಟ್ಟಿ ನಿಲ್ಲು, ಮುಂದೆ ಹೋಗಬೇಡ' ಎಂದು ಜೋರಾಗಿ ಕೂಗಿದ ಧ್ವನಿಯೊಂದು ಅತ್ತಲಿಂದ ಕೇಳಿತು.

'ಧ್ವನಿ ಅಪ್ಪಯ್ಯನದಲ್ಲವೇ? ಎಂದು ಕಾರಿನಲ್ಲಿ ಇದ್ದವರು ಕೇಳುವ ಮುನ್ನವೇ ಶಾರ್ವರಿ ಹೇಳತೊಡಗಿದಳು 'ಅದು ನಮ್ಮ ಅಪ್ಪಯ್ಯನ ಧ್ವನಿ. ಅವರು ನಾನು ಯಾವಾಗ ಮನೆಯಿಂದ ಹೊರಗೆ ಹೊರಟರೂ, ಈ ತಿರುವಿನ ಸಮೀಪ ಬರುತ್ತಿದ್ದಂತೆಯೇ ಕೂಗಿ ಕರೆಯುತ್ತಾರೆ. 'ಹುಷಾರು!' ಎಂದು ಹೇಳುತ್ತಾರೆ. ಅವರು ಕೂಗಿ ಹೀಗೆ ಹೇಳುವುದು, ನಾನು ಅವರ ಕೂಗಿಗೆ ಉತ್ತರವಾಗಿ 'ಆಯ್ತು ಅಪ್ಪಯ್ಯ, ಹುಷಾರಾಗಿ ಹೋಗಿ ಬರುತ್ತೇನೆ' ಎನ್ನುವುದು ಹಲವು ವರ್ಷಗಳಿಂದ ನಡೆಯುತ್ತಾ ಬಂದಿದೆ'.

ಶಾರ್ವರಿಯ ಈ ಉತ್ತರದಿಂದ ಕಾರಿನಲ್ಲಿ ಇದ್ದವರಿಗೆಲ್ಲ ಅಚ್ಚರಿ. ಹೀಗೂ ಇರುತ್ತದೆಯೇ ಎಂಬ ಒಂದು ಸಣ್ಣ ಅನುಮಾನದ ಎಳೆ ಬಂದು ಹೋಯಿತು. ಇವರ ಮನದೊಳಗಿನ ಅನುಮಾನವನ್ನು ಗ್ರಹಿಸಿದವಳಂತೆ ಶಾರ್ವರಿ 'ನನ್ನ ಮಾತಿನಿಂದ ನಿಮಗೆಲ್ಲ ಒಂದು ಅನುಮಾನ ಮೂಡಿರಲಿಕ್ಕೂ ಸಾಕು, ಇದೇನು ಹೀಗೆ ಎಂದು. ಅದೂ ಸರಿಯೇ. ಏಕೆಂದರೆ ಈ ರೀತಿ ಅನುಮಾನ ಪಡುತ್ತಿರುವವರು ನೀವು ಮೊದಲಿಗರೂ ಅಲ್ಲ ಕೊನೆಯವರೂ ಆಗುವುದಿಲ್ಲ. ನಮ್ಮಲ್ಲಿಗೆ ಬಂದು, ಉಳಿದು, ನನ್ನೊಂದಿಗೆ ಪ್ರಯಾಣಿಸಿದ ಎಲ್ಲರೂ ಇದೇ ರೀತಿ ಅನುಮಾನಪಟ್ಟು ನನ್ನನ್ನು ಪ್ರಶ್ನಿಸಿದ್ದಾರೆ. ಹಾಗಾಗಿ ನನಗೆ ಇದು ಹೊಸದೇನಲ್ಲ' ಎಂದು ಸಮಜಾಯಿಷಿ ರೂಪದ ಮಾತನ್ನು ಹೇಳಿದಳು.

ಸ್ವಲ್ಪ ಮುಂದೆ ಸಾಗಿದ ನಂತರ ಇದಕ್ಕೆಲ್ಲ ಒಂದು ದೊಡ್ಡ ಕಾರಣವೇ ಇದೆ ಎಂದು ತನ್ನ ಅನುಭವದ ಗಂಟನ್ನು ಬಿಚ್ಚುವವಳಂತೆ ಮಾತನ್ನು ಮುಂದುವರಿಸಿದ ಶಾರ್ವರಿ 'ನಾವು ದಾಟಿಕೊಂಡು ಬಂದೆವಲ್ಲ ಮುಖ್ಯರಸ್ತೆ, ಅದು ಕೇವಲ ರಸ್ತೆಯಲ್ಲ ನಮ್ಮ ಅಪ್ಪಯ್ಯನಿಗೆ. ಅದು ಅವರ ಜೀವನಕ್ಕೆ ಭಯಂಕರ ತಿರುವು, ಸ್ಥಿತ್ಯಂತರ ನೀಡಿದ ಜಾಗ. ನಾವು ದಾಟಿಕೊಂಡು ಬಂದೆವಲ್ಲ ನಾಲ್ಕು ರಸ್ತೆ ಕೂಡುವ